ಲೋಕೋಪಯೋಗಿ ಇಲಾಖೆ

ಸಂಖ್ಯೆ: ಸಕಾಲ: ಲೋಇ: ನಂ.2:ಉವಿ:ಸು.ಪ್ರ.ಪ:
2024-25/140

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ
ಲೋಇ, ನಂ.2, ಉತ್ತರ ಉಪವಿಭಾಗ, ಬೆಂಗಳೂರು
ದಿನಾಂಕಃ 29/06/2024

ಇವರಿಗೆ:

THE SECRETARY,
Edufrontiers Educational Trust
NATIONAL PUBLIC SCHOOL NORTH,
Sy No. 225/91/2, Kogulu Main Road,
Yelahanka Bengaluru- 560064.

ಮಾನ್ಯರೇ,

ವಿಷಯ:- Edufrontiers Educational Trust ವತಿಯಿಂದ Sy No. 225/91/2, Kogulu Main Road, Yelahanka Bengaluru- 560064. ವಿಳಾಸದಲ್ಲಿ ನಡೆಸಲಾಗುತ್ತಿರುವ NATIONAL PUBLIC SCHOOL NORTH, ಶೈಕ್ಷಣಿಕ ಸಂಸ್ಥೆಯ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ

ಉಲ್ಲೇಖ:-
1. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ:06.05.2022
2. ತಮ್ಮ ಮನವಿ ದಿನಾಂಕ:- 05.06.2024

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ (2) ರಲ್ಲಿ Edufrontiers Educational Trust ವತಿಯಿಂದ Sy No. 225/91/2, Kogulu Main Road, Yelahanka Bengaluru- 560064. ವಿಳಾಸದಲ್ಲಿ ನಡೆಸಲಾಗುತ್ತಿರುವ NATIONAL PUBLIC SCHOOL NORTH ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 06.05.2022 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಶಾಲಾ/ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ Structural stability ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಅಧಿಕಾರ ಪ್ರತ್ಯಾಯೋಜನೆಗೊಳಿಸಿ ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡಕ್ಕೆ ಈ ಕೆಳಕಂಡಂತೆ ವರದಿ ನೀಡಲಾಗಿದೆ.

ಪ್ರಸ್ತಾಪಿತ ಕಟ್ಟಡದ ಪರಿವೀಕ್ಷಣೆಯನ್ನು ಕೆಳಗೆ ಸಹಿ ಮಾಡಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ:- 22.06.2023 ರಂದು ಈ ಉಪವಿಭಾಗದ ತಾಂತ್ರಿಕ ತಂಡದೊಂದಿಗೆ ಹಾಗೂ Dr. Kiran. T, B.E (Civil), M.E. (Structures), Ph.D, Associate Professer, Department of Civil Engineering, UVCE, Bangalore of University, Bangalore – 560 056, ರವರೊಂದಿಗೆ **NATIONAL PUBLIC SCHOOL NORTH** ಕಟ್ಟಡವನ್ನು ಸದರಿ ವಿದ್ಯಾಸಂಸ್ಥೆ ಯವರ ನೋಂದಾಯಿತ ಸ್ಟ್ರಕ್ಚರಲ್ ಇಂಜಿನಿಯರ್ ರವರ ಉಪಸ್ಥಿತಿಯಲ್ಲಿ ಪರಿವೀಕ್ಷಣೆ ಮಾಡಿದ್ದು, ಕಟ್ಟಡವನ್ನು 2021 ರಲ್ಲಿ ನಿರ್ಮಿಸಲಾಗಿದ್ದು, ಕಟ್ಟಡವು G+3 ಹೊಂದಿರುವಂತೆ ನಿರ್ಮಿಸಲಾಗಿದ್ದು, ಬ್ಲಾಕ್-ಎ ಮತ್ತು ಬ್ಲಾಕ್-ಬಿ ಕಟ್ಟಡವು ಇದ್ದು, **ಬ್ಲಾಕ್-ಎ** ನಲ್ಲಿ ನರ್ಸರಿ-6 ಸಂಖ್ಯೆ, ಕಿಂಡರ್ ಗಾರ್ಡನ್-12 ಸಂಖ್ಯೆ, ಪ್ರಾಂಶುಪಾಲರ ಕೊಠಡಿ-1, ಸ್ಟಾಫ್‌ರೂಂ -2, ಆಡಳಿತ ವಿಭಾಗ -1, ಹಾರ್ಟ್‌ರೂಂ-1, ಸ್ಟೋರ್ ರೂಂ-1, ಎಲೆಕ್ಟ್ರಿಲ್ ರೂಂ.1, ತರಗತಿ ಕೋಣೆಗಳು -10 ಸಂಖ್ಯೆ ಕೊಠಡಿಗಳು ಹಾಗೂ ಬಾಲಕ ಮತ್ತು ಬಾಲಕಿಯರ ಶೌಚಾಲಗಳನ್ನು ಒಳಗೊಂಡಿರುತ್ತದೆ. **ಬ್ಲಾಕ್-ಬಿ** ನಲ್ಲಿ ಉಪಪ್ರಾಂಶುಪಾಲರ ಕೊಠಡಿ-1, ಸ್ಟಾಫ್‌ರೂಂ -3, ಲ್ಯಾಬ್-1, ಆಡಳಿತ ವಿಭಾಗ -1, ಸ್ಟೋಟ್ಸ್ ರೂಂ-1, ಸರ್ವರ್ ರೂಂ-1, ಎಲೆಕ್ಟಿಲ್ ರೂಂ-1, ಗ್ರಂಥಾಲಯ, ತರಗತಿ ಕೋಣೆಗಳು -47 ಸಂಖ್ಯೆ ಕೊಠಡಿಗಳು ಹಾಗೂ ಬಾಲಕ

ಮತ್ತು ಬಾಲಕಿಯರ ಶೌಚಾಲಗಳನ್ನು ಒಳಗೊಂಡಿರುತ್ತದೆ. ಕಟ್ಟಡದ ದೃಢತೆಗೆ ಸಂಬಂಧಿಸಿದಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 06.05.2022 ರಲ್ಲಿ ತಿಳಿಸಿರುವಂತೆ ನೊಂದಾಯಿತ ಸಂಸ್ಥೆಯವರ ಸಹಯೋಗದೊಂದಿಗೆ 2 ರೀತಿಯ Dr. Kiran. T, B.E (Civil), M.E. (Structures), Ph.D, Associate Professer, Department of Civil Engineering, UVCE, Bangalore of University, Bangalore – 560 056, ರವರ ವತಿಯಿಂದ ಕೈಗೊಳ್ಳಲಾಗಿದ್ದು, ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ ಮತ್ತು ಫಲಿತಾಂಶಗಳು ತೃಪ್ತಿಕರವಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿರುತ್ತದೆ.

ಸಂಸ್ಥೆಯವರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

- ಕಟ್ಟಡದ ನಕ್ಷೆ.
- ಸ್ಟೆಬಿಲಿಟಿ ರಿಪೋರ್ಟ್
- ಕ್ರಯ ಪತ್ರ
- ಸ್ಟ್ರಕ್ಚರಲ್ ಡ್ರಾಯಿಂಗ್

ಮುಂದುವರೆದು, ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯನ್ವಯ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ನಿಗದಿಪಡಿಸಿರುವ ಶುಲ್ಕ ಒಟ್ಟು ರೂ. 5000/– (ರೂ.ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಡಿ.ಡಿ. ಮುಖೇನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ, ನಂ.2, ಉತ್ತರ ಉಪವಿಭಾಗ, ಬೆಂಗಳೂರು ರವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಡಿ.ಡಿ. ಸಂಖ್ಯೆ 058681 ದಿನಾಂಕ: 28.06.2024 ರಲ್ಲಿ ಪಾವತಿಸಿರುತ್ತಾರೆ.

ಪ್ರಸ್ತಾಪಿತ ಕಟ್ಟಡದ Non - Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮನಃಶ್ಶಾಸ್ತ್ರಜ್ಞ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯವರಿಂದ ಪಡೆಯಬೇಕಾಗಿರುತ್ತದೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಕಟ್ಟಡವನ್ನು ಪರಿವೀಕ್ಷಿಸಿ, Dr. Kiran. T, B.E (Civil), M.E. (Structures), Ph.D, Associate Professer, Department of Civil Engineering, UVCE, Bangalore of University, Bangalore – 560 056, ರವರು ನೀಡಿರುವ ಅಗತ್ಯ ಪರೀಕ್ಷೆಗಳ ವರದಿಯನ್ನಾದರಿಸಿ EDUFRONTIERS EDUCATIONAL TRUST ವತಿಯಿಂದ No. 225/91/2, Kogilu Village, Yelahanka Hobli, Bangalore North Taluk, Bangalore- 560064 ವಿಳಾಸದಲ್ಲಿ ನಡೆಸಲಾಗುತ್ತಿರುವ **NATIONAL PUBLIC SCHOOL NORTH** ಕಟ್ಟಡವು Structurally Stable ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಲೋಇ., ನಂ.2, ಉತ್ತರ ಉಪವಿಭಾಗ,
ಬೆಂಗಳೂರು.